"ಕಾಗದ ಬರ್ದೇ ಇರುತ್ತಾ? ಬಂದಿತ್ತು. ಭಾರೀ ಲಾಯ್ಖುಂಟಂತೆ ವೈಕುಂಠ. 'ಬಾಕಿ ಸಂಗ್ತಿ ಮೊಕ್ತಾ' ಅಂತ ಬರ್ದಿದಾನೆ..."

ಮುಕ್ತ ನಗುವಿನೊಂದಿಗೆ ಪರಸ್ಪರ ಬೀಳ್ಕೊಂಡು ಮನೆಗೆ ಬರುವಾಗ ಭಟ್ಟರಿಗೆ ಅಚಾನಕ್ಕಾಗಿ ತಮ್ಮ ಬಾಯಿಂದ ಹೊರಬಿದ್ದ ಪದಗಳ ನೆನವರಿಕೆ. 'ಬಾಕಿ ಸಂಗ್ತಿ ಮೊಕ್ತಾ' ಅನ್ನುವ ಮಾತು ಅಂತರಂಗದಿಂದ ಸ್ಫುರಿಸಿದ್ದಾ? 'ಇಹದ ಜೀವನ ಇನ್ನು ಸಾಕು' ಅನಿಸತೊಡಗಿದೆಯಾ? ಈಗಾಗಲೇ ತಮ್ಮ ಇಚ್ಛೆಗೆ ಸಮನಾಗಿ ಸ್ಪಂದಿಸದ ಶರೀರದ ಚೈತನ್ಯ ಪೂರಾ ಕುಸಿಯುವ ಮುನ್ನ ದಾಟಿಕೊಂಡು ಬಿಡಬೇಕೆಂಬ ಹಂಬಲವೇ? ಒಂದೊಮ್ಮೆ ಶೀನಪ್ಪಯ್ಯ ಹಾಗೊಂದು ಪತ್ರ ಬರೆದರೆ ಬಾಕಿ ಸಂಗ್ತಿಯ ಕುರಿತು ಹರಟೆ ಕೊಚ್ಚಲು ತಾವು ನಿಂತ ಕಾಲಲ್ಲಿ ಹೊರಡಲು ಸಿದ್ಧ ಅನಿಸತೊಡಗಿ, ಇದೇನು ವಯಸ್ಸಿನ ಪರಿಣಾಮವೋ, ಪರಿಸ್ಥಿತಿಯೋ, ನಗಣ್ಯರಾಗುತ್ತಿದ್ದೇವೆಂಬ ಭಾವ ತಂದ ಅಸಹಾಯಕತೆಯೋ, ಒಟ್ಟಾರೆಯಾಗಿ ಮಾತಲ್ಲಿ ಹೇಳಬರದ ಅಸಹನೆಯೋ, ಅಥವಾ ಒಂಟಿತನದ ಪರಿಣಾಮವೋ ಗೊತ್ತಾಗದ ಗೊಂದಲದಲ್ಲಿ ಅಂಗಳದಂಚಿನ ಉಣುಗೋಲು ಎಳೆದು ಒಳಗೆ ಕಾಲಿಟ್ಟ ಸದಾಶಿವಭಟ್ಟರಿಗೆ ಮತ್ತೊಂದೇನೋ ಹಳೆಗಾಲದ ನೆನಪು. ನೂರು ದಾಟಿದ ವಯೋವೃದ್ಧರೊಬ್ಬರನ್ನು ನೋಡಿ ಬರಲು ಹೋದಾಗ ಹಾಸಿಗೆ ಹಿಡಿದು ಮಲಗಿ ದಿನ ದೂಡುತ್ತಿದ್ದ ಆ ಮನುಷ್ಯ ಕುಂಯ್ಗುಟ್ಟಿದ್ದರು,

"ಯಮಧರ್ಮರಾಯ ನನ್ನ ವಿಳಾಸಾನೇ ಮರೆತು ಬಿಟ್ಟಿದಾನೆ ಮಾರಾಯಾ. ಕೊನೆಗೂ ಅವನಿಗೆ ನನ್ನ ನೆನಪಾಗುತ್ತೋ, ಇಲ್ವೋ?"

ಪ್ರಾಯದ ಗಮ್ಮತ್ತಿನಲ್ಲಿದ್ದ ಭಟ್ಟರು ತಮಾಷಿಯಾಗಿ ಹೇಳಿದ್ದರು,

"ತಡೀರಿ, ಒಂದು ಕೆಲ್ಸ ಮಾಡೋಣ. ನಿಮ್ಮ ಹೆಸರು, ವಿಳಾಸದ ಬೋರ್ಡ್ ಬರೆಸಿ ಹೊರಗಡೆ ಗೋಡೆಗೆ ನೇತು ಹಾಕ್ಬಿಡೋಣ. ನಿಮ್ಮ ಯಮಧರ್ಮರಾಯ ಇತ್ಲಾಕಡೆ ಎಲ್ಲಾದ್ರೂ ಸರ್ಕೀಟು ಬಂದ್ರೆ ನೋಡಿದ್ರೂ ನೋಡಿಯಾನು..."

ಸಾವನ್ನು ಸಹಜವಾಗಿ ಮುಕ್ತ ಮನಸ್ಸಿನಿಂದ ಸ್ವಾಗತಿಸುವ ಮನೋಧರ್ಮ ಬೆಳೆಸಿಕೊಂಡರೆ ಭಯಾನಕವೆನಿಸುವ ಸಾವು ಕೂಡಾ ಆಪ್ತವಾಗಿಬಿಡುತ್ತದೆಯಾ? ಏನಿದೆ ಸಂಶಯ?

(ಬಾಕಿ ಸಂಗ್ತಿ ಮೊಕ್ತಾ–_ (ಬಾಕಿ ಸಂಗತಿ ಮುಖತಃ): ಪತ್ರವ್ಯವಹಾರ ವ್ಯಾಪಕವಾಗಿ ಪ್ರಚಲಿತವಿದ್ದ ಕಾಲದಲ್ಲಿ ಹಿರಿ ತಲೆಗಳು ಪತ್ರದ ಕೊನೆಯಲ್ಲಿ ತಪ್ಪದೆ ನಮೂದಿಸುತ್ತಿದ್ದ ಪದಗುಚ್ಛಗಳು).

---

## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.